# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **1527** |
| ಸದಸ್ಯರ ಹೆಸರು | : | **ಡಾ|| ತಳವಾರ್ ಸಾಬಣ್ಣ**<br>**(ನಾಮ ನಿರ್ದೇಶನ ಹೊಂದಿದ ವಿಧಾನ ಪರಿಷತ್ತಿನ ಸದಸ್ಯರು)** |
| ಉತ್ತರಿಸುವ ದಿನಾಂಕ | : | **18-03-2021** |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಎ) | ಜಲ ಸಂಪನ್ಮೂಲ ಇಲಾಖೆಯಿಂದ 182 ಸಹಾಯಕ ಇಂಜಿನಿಯರ್ ಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನೀಯರ್ (ವಿಭಾಗ-1) (ಮೆಕಾನಿಕಲ್ ಮತ್ತು ಸಿವಿಲ್) ವೃಂದಕ್ಕೆ ಪದನ್ನೋತಿ ನೀಡಲಾಗಿದೆಯೇ; | ಪದೋನ್ನತಿ ನೀಡಿಲ್ಲ.<br><br>ಆದರೆ, ಜಲಸಂಪನ್ಮೂಲ ಇಲಾಖೆಯಲ್ಲಿ ಬಹಳಷ್ಟು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗಳ ಹುದ್ದೆಯು ಖಾಲಿ ಇದ್ದುದರಿಂದ ಹಾಗೂ ನೀರಾವರಿ ಯೋಜನೆಗಳ ಕಾಮಗಾರಿಗಳನ್ನು ತ್ವರಿತವಾಗಿ ಹಾಗೂ ಆಧ್ಯತೆಯ ಮೇಲೆ ಕೈಗೊಳ್ಳಬೇಕಾಗಿದ್ದುದರಿಂದ ಅಧಿಸೂಚನೆ ಸಂಖ್ಯೆ ಜಸಂಇ 48 ಸೇಸಎ 2020 ದಿನಾಂಕ 04/06/2020ರಲ್ಲಿ ಒಟ್ಟು 182 ಸಹಾಯಕ ಇಂಜಿನಿಯರ್ (ಸಿವಿಲ್) ಹಾಗೂ (ಮೆಕ್ಯಾನಿಕಲ್) ವೃಂದದಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿರಿಸಲಾಗಿದೆ. |
| ಬಿ) | ನೀಡಿದ್ದಲ್ಲಿ, ಕಲ್ಯಾಣ ಕರ್ನಾಟಕ (ಹಿಂದಿನ ಹೈದರಾಬಾದ್ ಕರ್ನಾಟಕ ಕಲಂ 371ಜೆ ಮೀಸಲಾತಿ ಅಡಿಯಲ್ಲಿ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಹಾಯಕ ಇಂಜಿನೀಯರ್ ಗಳನ್ನು ಪರಿಗಣಿಸಿಲ್ಲದಿರುವುದರಿಂದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಇಂಜಿನಿಯರ್ ಗಳಿಗೆ ಅನ್ಯಾಯವಾಗುವುದಿಲ್ಲವೆ; ಈ ಅನ್ಯಾಯವನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ? | ಕಲ್ಯಾಣ ಕರ್ನಾಟಕ (ಹೈದರಾಬಾದ್ ಕರ್ನಾಟಕ) ಪ್ರದೇಶಕ್ಕೆ ಭಾರತ ಸಂವಿಧಾನದ ಅನುಚ್ಛೇದ 371ಜೆ ರಡಿಯಲ್ಲಿ ಜಲಸಂಪನ್ಮೂಲ ಇಲಾಖೆಯ ಅಧಿಸೂಚನೆ ಸಂಖ್ಯೆ ಜಸಂಇ 167 ಸೇಅವಿ 2013, ದಿನಾಂಕ: 30/06/2016 ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರ ವೃಂದಕ್ಕೆ ಈ ಕೆಳಕಂಡಂತೆ 87 ಹುದ್ದೆಗಳ ಮೀಸಲಾತಿಯನ್ನು ನಿಗಧಿಪಡಿಸಿ ಆದೇಶಿಸಿದೆ :<br><br>ಎ) ರಾಜ್ಯ ಮಟ್ಟದ ಸ್ಥಳೀಯ ವೃಂದ — 3 ಹುದ್ದೆಗಳು<br>ಬಿ) ಪ್ರಾದೇಶಿಕ ಸ್ಥಳೀಯ ವೃಂದ — 84 ಹುದ್ದೆಗಳು<br>**ಒಟ್ಟು — 87 ಹುದ್ದೆಗಳು** |

ಮೇಲ್ಕಂಡ ಮೀಸಲಾತಿಯನ್ವಯ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮೀಸಲಾಗಿರಿಸಿರುವ 87 ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗಳ ಪೈಕಿ ಈಗಾಗಲೇ 44 ಹುದ್ದೆಗಳನ್ನು ಪರಿಗಣಿಸಲಾಗಿದ್ದು ವಿವರಗಳು ಈ ಕೆಳಕಂಡಂತಿದೆ :

| | | |
|---|---|---|
| ಎ) | ಅಧಿಸೂಚನೆ ಸಂಖ್ಯೆ: ಜಸಂಇ 48 ಸೇಸಎ 2020 ದಿನಾಂಕ: 04/06/2020ರಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಿರುವ ಸಹಾಯಕ ಇಂಜಿನಿಯರ್ ಗಳ ಸಂಖ್ಯೆ | 10 |
| ಬಿ) | ದಿನಾಂಕ 4-6-2020 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯು ನಿಯಮ 32 ರಲ್ಲಿರಿಸಲು ಶಿಫಾರಸ್ಸು ಮಾಡಿರುವ ಸಹಾಯಕ ಇಂಜಿನಿಯರ್ ಗಳ ಸಂಖ್ಯೆ | 4 |
| ಸಿ) | ದಿನಾಂಕ: 15.02.2021ರ ಮತ್ತು 09.03.2021ರ ಪದೋನ್ನತಿ ಸಮಿತಿಯ ತೀರ್ಮಾನದಂತೆ ಸ್ವತಂತ್ರ ಪ್ರಭಾರದಲ್ಲಿರಿಸಲು ಶಿಫಾರಸ್ಸು ಮಾಡಿರುವ ಸಹಾಯಕ ಇಂಜಿನಿಯರ್ ಗಳ ಸಂಖ್ಯೆ | 30 |
| | **ಒಟ್ಟು** | **44** |

ಹೈದ್ರಾಬಾದ್-ಕರ್ನಾಟಕ ರಾಜ್ಯ ಮಟ್ಟದ ಸ್ಥಳೀಯ ವೃಂದ ಮತ್ತು ಪ್ರಾದೇಶಿಕ ಸ್ಥಳೀಯ ವೃಂದದ ಸಹಾಯಕ ಇಂಜಿನಿಯರ್ (ಸಿವಿಲ್ / ಮೆಕ್ಯಾನಿಕಲ್) ವೃಂದದ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಜಸಂಇ 104 ಸೇಸಕಿ 2016, ದಿನಾಂಕ 7-10-2020 ರಲ್ಲಿ ಪ್ರಕಟಿಸಲಾಗಿತ್ತು. ಈ ಅಧಿಸೂಚನೆಗೆ ಹಲವಾರು ಆಕ್ಷೇಪಣೆಗಳು ಸ್ವೀಕೃತವಾಗಿದ್ದವು. ಅಲ್ಲದೇ, ಇತ್ತೀಚೆಗೆ ಹರಪನಹಳ್ಳಿ ತಾಲ್ಲೂಕನ್ನು ಬಳ್ಳಾರಿ ಜಿಲ್ಲೆಗೆ ಸೇರ್ಪಡೆಗೊಳಿಸಿದ್ದರಿಂದ ಆ ವಿಭಾಗಕ್ಕೆ ಸೇರಿದ ಕೆಲವು ಇಂಜಿನಿಯರ್ ಗಳು ತಮ್ಮನ್ನೂ ಸಹ ಕಲ್ಯಾಣ ಕರ್ನಾಟಕ ಮೀಸಲಾತಿಯಡಿ ಪರಿಗಣಿಸುವಂತೆ ಕೋರಿರುತ್ತಾರೆ.

ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗೆ ಸ್ವೀಕೃತವಾದ ಎಲ್ಲಾ ಆಕ್ಷೇಪಣೆಗಳನ್ನು ಪರಿಶೀಲಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಕಲ್ಯಾಣ ಕರ್ನಾಟಕ) ವಿಭಾಗಕ್ಕೆ ಅಭಿಪ್ರಾಯ / ಸ್ಪಷ್ಟೀಕರಣ ಕೋರಿ ಕಡತವನ್ನು ಕಳುಹಿಸಲಾಗಿದೆ. ಆ ವಿಭಾಗದಿಂದ ಅಭಿಪ್ರಾಯ ಸ್ವೀಕೃತವಾದ ನಂತರ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಿ ಅದರ ಆಧಾರದ ಮೇಲೆ ಈ ಉದ್ದೇಶಕ್ಕಾಗಿ ಈಗಾಗಲೇ ಮೀಸಲಿರಿಸಿರುವ 43 ಹುದ್ದೆಗಳಿಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದಕ್ಕೆ ನಿಯಮ 32 ರಡಿ ಸ್ವತಂತ್ರ ಪ್ರಭಾರದಲ್ಲಿರಿಸಲು ಕ್ರಮ ವಹಿಸಲಾಗುವುದು.

ಸಂಖ್ಯೆ : ಜಸಂಇ 04 ಸೇಸಎ 2021.

**(ಬಿ. ಎಸ್. ಯಡಿಯೂರಪ್ಪ)**
ಮುಖ್ಯಮಂತ್ರಿ